# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1499 |
| ಸದಸ್ಯರ ಹೆಸರು | : | ಶ್ರೀ ಸಿ.ಟಿ. ರವಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 20.03.2025 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ನಕ್ಸಲ್ ಚಟುವಟಿಕೆಗಳನ್ನು ಹತ್ತಿಕ್ಕಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ನಕ್ಸಲ್ ನಿಗ್ರಹಕ್ಕಾಗಿ ಎಷ್ಟು ವೆಚ್ಚವಾಗಿದೆ ; | 1. ಕರ್ನಾಟಕ ರಾಜ್ಯದಲ್ಲಿ ನಕ್ಸಲ್ ಚಟುವಟಿಕೆಗಳನ್ನು ಹತ್ತಿಕ್ಕಲು ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 1 ಪಿಒಪಿ 2005(ಭಾಗ) ಬೆಂಗಳೂರು, ದಿನಾಂಕ: 21/05/2005 ರಲ್ಲಿ ನಕ್ಸಲ್ ನಿಗ್ರಹ ಪಡೆಯನ್ನು ಸೃಜಿಸಲಾಗಿರುತ್ತದೆ.<br>2. ನಕ್ಸಲರ ನಿಗ್ರಹಕ್ಕಾಗಿ ಕರ್ನಾಟಕ ರಾಜ್ಯದ ಉಡುಪಿ ಜಿಲ್ಲೆಯ ಕಾರ್ಕಳ, ಹೆಬ್ರಿ, ಜಡ್ಡಿನಗದ್ದೆ ಪ್ರದೇಶದಲ್ಲಿ ಚಿಕ್ಕಮಗಳೂರು ಜಿಲ್ಲೆಯ ದೇವಾಲೆಕೊಪ್ಪ, ಕಿಗ್ಗಾ, ಕೆರೆಕಟ್ಟೆ, ಜಯಪುರ ಪ್ರದೇಶದಲ್ಲಿ ಶಿವಮೊಗ್ಗ ಜಿಲ್ಲೆಯ ಆಗುಂಬೆ ಪ್ರದೇಶದಲ್ಲಿ ಕೊಡಗು ಜಿಲ್ಲೆಯ ಭಾಗಮಂಡಲ, ಆರ್ಜಿ, ಕುಟ್ಟ ಪ್ರದೇಶದಲ್ಲಿ ಮೈಸೂರು ಜಿಲ್ಲೆಯ ಬೀಚನಹಳ್ಳಿ ಪ್ರದೇಶದಲ್ಲಿ, ಚಾಮರಾಜನಗರ ಜಿಲ್ಲೆಯ ಬರಗಿ ಪ್ರದೇಶದಲ್ಲಿ ಮತ್ತು ತುಮಕೂರು ಜಿಲ್ಲೆಯ ಪಾವಗಡ, ತಿರುಮಣಿ ಪ್ರದೇಶದಲ್ಲಿ ಎಎನ್‌ಎಫ್ ಕ್ಯಾಂಪ್‌ಗಳನ್ನು ಹಾಗೂ ಉಡುಪಿ ಜಿಲ್ಲೆಯ ಕುಕ್ಕುಂದೂರು ಪ್ರದೇಶದಲ್ಲಿ ಜೆ.ಸಿ.ಯು ತರಬೇತಿ ಕೇಂದ್ರ ಸೇರಿದಂತೆ ಒಟ್ಟು 16 ಸಂಖ್ಯೆಯ ಎಎನ್‌ಎಫ್ ಕ್ಯಾಂಪ್‌ಗಳನ್ನು ತೆರೆದು ನಕ್ಸಲ್ ಚಲನವಲನಗಳು ಕಂಡುಬರುವ ಅರಣ್ಯ ಪ್ರದೇಶಗಳಲ್ಲಿ ನಿರಂತರ ಕೂಂಬಿಂಗ್, ಆಂಬುಷ್ ಕಾರ್ಯಾಚರಣೆಯನ್ನು ಕೈಗೊಳ್ಳಲಾಗುತ್ತಿದೆ.<br>3. ನಕ್ಸಲ್ ನಿಗ್ರಹ ಪಡೆಯಲ್ಲಿ ಪ್ರತ್ಯೇಕವಾಗಿ ಗುಪ್ತಮಾಹಿತಿ ತಂಡವಿದ್ದು, ಸದರಿ ತಂಡದಿಂದ ನಕ್ಸಲರ ಚಟುವಟಿಕೆ/ಚಲನವಲನಗಳ ಕುರಿತು ತಳಮಟ್ಟದಲ್ಲಿ ಮಾಹಿತಿ ಸಂಗ್ರಹಿಸಿ ಕಾರ್ಯಾಚರಣೆಯನ್ನು ಕೈಗೊಳ್ಳಲಾಗುತ್ತಿದೆ.<br>4. ಕರ್ನಾಟಕ ರಾಜ್ಯದಲ್ಲಿ ಶರಣಾಗತರಾಗುವ ನಕ್ಸಲರಿಗೆ ಈವರೆಗೂ ಪ್ರಸ್ತುತ 2024ನೇ ಸಾಲಿನಲ್ಲಿ ಶರಣಾಗತಿ ಪಾಲಿಸಿಯನ್ನು ಶರಣಾಗತರಾಗಿ ಸಮಾಜದ ಮುಖ್ಯವಾಹಿನಿಗೆ ಬರುವ ನಕ್ಸಲರಿಗೆ ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಯೋಜನೆಯಡಿ ಪ್ರೋತ್ಸಾಹಧನ ಮಂಜೂರು ಮಾಡುವ ಬಗ್ಗೆ ರಾಜ್ಯ ಸರ್ಕಾರವು ಆದೇಶಿಸಿರುತ್ತದೆ. |

<table>
<tr>
<td></td>
<td></td>
<td>5. ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಯೋಜನೆಯಡಿ ಈವರೆಗೂ 22 ಜನ ಭೂಗತ ನಕ್ಸಲರು ಶರಣಾಗತರಾಗಿರುತ್ತಾರೆ.<br><br>ನಕ್ಸಲ್ ನಿಗ್ರಹಕ್ಕಾಗಿ ಇದುವರೆಗೆ ಆಗಿರುವ ವೆಚ್ಚ ಈ ಕೆಳಗಿನಂತೆ ಇರುತ್ತದೆ:-
<table>
<tr><th>ಕ್ರ. ಸಂ</th><th>ವಿವರ</th><th>ಅವಧಿ</th><th>ಮೊತ್ತ (ರೂ.ಗಳಲ್ಲಿ)</th></tr>
<tr><td>1</td><td>ವೇತನ</td><td>2018 ರಿಂದ ಫೆಬ್ರವರಿ-2025</td><td>150,28,24,168/-</td></tr>
<tr><td>2</td><td>ವೇತನೇತರ</td><td>2008 ರಿಂದ ಮಾರ್ಚ್ 2025 (04/03/2025 ರವರೆಗೆ)</td><td>51,13,35,215/-</td></tr>
<tr><td colspan="3">ಒಟ್ಟು ರೂ.</td><td>201,41,59,383/-</td></tr>
</table>
</td>
</tr>
<tr>
<td>ಆ)</td>
<td>ನಕ್ಸಲರು ಶರಣಾಗಲು ಹಾಕಿದ್ದ ಷರತ್ತುಗಳೇನು ; ಎಷ್ಟು ಷರತ್ತುಗಳಿಗೆ ಸರ್ಕಾರ ಒಪ್ಪಿಗೆ ನೀಡಿದೆ ; (ಈವರೆಗೆ ಶರಣಾಗತರಾಗಿರುವ ನಕ್ಸಲರ ಹೆಸರು ಸಹಿತ ವಿವರ ಒದಗಿಸುವುದು)</td>
<td>ನಕ್ಸಲರು ಶರಣಾಗಲು ಹಾಕಿದ್ದ ಷರತ್ತುಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.<br><br>ದಿನಾಂಕ :06.01.2025 ರಂದು ಸರ್ಕಾರದ ಮುಖ್ಯಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯಮಟ್ಟದ ನಕ್ಸಲ್ ಶರಣಾಗತಿ ಸಮಿತಿ ಸಭೆಯಲ್ಲಿ ಔಪಚಾರಿಕ ಶರಣಾಗತಿಯನ್ನು ಅಂಗೀಕರಿಸಲು ತೀರ್ಮಾನಿಸಲಾಗಿರುತ್ತದೆ.<br><br>ರಾಜ್ಯದಲ್ಲಿ ಈವರೆಗೆ ಶರಣಾಗತರಾಗಿರುವ ನಕ್ಸಲರ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.</td>
</tr>
<tr>
<td>ಇ)</td>
<td>ಶರಣಾಗತರಾಗಿರುವ ನಕ್ಸಲರಿಗೆ ಸರ್ಕಾರ ಪ್ಯಾಕೇಜ್ ಘೋಷಿಸಿದೆಯೇ ; ಪ್ಯಾಕೇಜ್ ಘೋಷಣೆಗೆ ಸರ್ಕಾರ ಅನುಸರಿಸಿರುವ ಮಾನದಂಡಗಳೇನು ; (ವಿವರ ನೀಡುವುದು)</td>
<td>ಕರ್ನಾಟಕ ರಾಜ್ಯದಲ್ಲಿ ಶರಣಾಗತರಾಗುವ ನಕ್ಸಲರಿಗೆ ಪುನರ್ವಸತಿ ಯೋಜನೆಯಡಿ ಪ್ರೋತ್ಸಾಹಧನ/ ಸಹಾಯಧನ ಹಾಗೂ ಪುನರ್‌ವಸತಿ ಸೌಲಭ್ಯಗಳನ್ನು ಸರ್ಕಾರವು ಆದೇಶ ಸಂಖ್ಯೆ : ಹೆಚ್‌ಡಿ 402 ಎಸ್‌ಎಸ್‌ಟಿ 2023 (ಭಾಗ-1), ದಿನಾಂಕ : 14.03.2024ರಲ್ಲಿ ಕಲ್ಪಿಸಲಾಗಿದೆ (ಪ್ರತಿ ಲಗತ್ತಿಸಿದೆ).<br><br>ಸರ್ಕಾರ ಅನುಸರಿಸುವ ಮಾನದಂಡಗಳನ್ನು ಲಗತ್ತಿಸಿರುವ ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 402 ಎಸ್‌ಎಸ್‌ಟಿ 2023 (ಭಾಗ-1), ದಿನಾಂಕ : 14.03.2024ರಲ್ಲಿ ವಿವರಿಸಲಾಗಿದೆ</td>
</tr>
<tr>
<td>ಈ)</td>
<td>ಶರಣಾಗತರಾದ ನಕ್ಸಲರು ಬಳಸುತ್ತಿದ್ದ ಎಲ್ಲಾ ರೀತಿಯ ಶಸ್ತ್ರಗಳನ್ನು ಸರ್ಕಾರ ವಶಪಡಿಸಿಕೊಂಡಿದೆಯೇ;</td>
<td>ಶರಣಾಗತಿ ಸಮಯದಲ್ಲಿ ಮತ್ತು ಅವರು ನೀಡಿದ ಮಾಹಿತಿ ಮೇರೆಗೆ ವಿವಿಧ ಸ್ಥಳಗಳಲ್ಲಿ ಅಡಗಿಸಿಟ್ಟಿದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ.</td>
</tr>
</table>

| | | |
|---|---|---|
| ಉ) | ಇನ್ನುಳಿದ ನಕ್ಸಲರನ್ನು ಪತ್ತೆ ಹಚ್ಚಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ರಾಜ್ಯವನ್ನು ಈಗ ನಕ್ಸಲ್ ಮುಕ್ತ ರಾಜ್ಯ ಎಂದು ಸರ್ಕಾರ ಘೋಷಣೆ ಮಾಡುವುದೇ? | ಹಾಲಿ ರಾಜ್ಯದಲ್ಲಿ ಕಾರ್ಯಾಚರಿಸುತ್ತಿದ್ದ ಹಾಗೂ ಘೋಷಿಸಲಾಗಿದ್ದ ನಕ್ಸಲರೆಲ್ಲರೂ ಶರಣಾಗಿರುತ್ತಾರೆ. ಆದರೂ, ಸದರಿ ಅರಣ್ಯ ಪ್ರದೇಶಗಳಲ್ಲಿ ನಕ್ಸಲ್ ಚಟುವಟಿಕೆ/ಚಲನವಲನಗಳನ್ನು ಪತ್ತೆಹಚ್ಚಲು ನಕ್ಸಲ್ ನಿಗ್ರಹ ಪಡೆಯ ಗುಪ್ತ ಮಾಹಿತಿ ತಂಡದಿಂದ ತಳಮಟ್ಟದಲ್ಲಿ ಮಾಹಿತಿ ಸಂಗ್ರಹಿಸಲಾಗುತ್ತಿದೆ.<br><br>ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ನಕ್ಸಲ್ ಮುಕ್ತ ಎಂದು ಘೋಷಿಸಿರುತ್ತಾರೆ. |

ಹೆಚ್‌ಡಿ 144 ಎಸ್‌ಎಸ್‌ಟಿ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು

ಅನುಬಂಧ-1

ಇವರಿಗೆ, [illegible]

**ಶ್ರೀ ಸಿದ್ಧರಾಮಯ್ಯನವರು,**

ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

*ವಿಷಯ: ಸಶಸ್ತ್ರ ಹೋರಾಟ ತ್ಯಜಿಸಿ ಪ್ರಜಾತಾಂತ್ರಿಕ ಹೋರಾಟ ನಡೆಸುವ ಉದ್ದೇಶದಿಂದ ಮುಖ್ಯವಾಹಿನಿಗೆ ಬರುತ್ತಿರುವ ನಮ್ಮ ಹಕ್ಕೊತ್ತಾಯಗಳು*

ಕಳೆದ ೨೫ ವರ್ಷಗಳಿಂದ ಕರ್ನಾಟಕದ ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ [illegible] ಸಮುದಾಯಗಳಲ್ಲಿ ನಿರಂತರವಾಗಿ [illegible] ಜನರ ಸಮಸ್ಯೆಗಳನ್ನು ಕಣ್ಣಾರೆ ಕಂಡು ಅವರ ಬವಣೆಯನ್ನು ನಿವಾರಿಸಲು ಜನರೊಂದಿಗೆ ಚಳವಳಿಯಲ್ಲಿ ತೊಡಗಿದ್ದೆವು. ಈಗ, ನಾವು ಮುಖ್ಯವಾಹಿನಿಗೆ ಬರುತ್ತಿರುವುದರಿಂದ ಜನರ ಸಮಸ್ಯೆಗಳನ್ನು ಈ ಕೆಳಕಂಡಂತೆ ಹಕ್ಕೊತ್ತಾಯಗಳಾಗಿ ಸರ್ಕಾರದ ಮುಂದೆ ಇಡುತ್ತಿದ್ದೇವೆ

ಹಕ್ಕೊತ್ತಾಯಗಳು:

1. ನಮ್ಮ ರಾಜ್ಯದಲ್ಲಿ ಭೂಮಿ ಇಲ್ಲದ ಪ್ರತಿ ಕುಟುಂಬಕ್ಕೆ 5 ಎಕರೆ ಕೃಷಿ ಯೋಗ್ಯ ಭೂಮಿ ಕೊಡಬೇಕು
   - ಹಾಲಿ ಈಗ ಭೂಮಿ ಇರುವವರಿಗೆ ಶಾಶ್ವತ ಹಕ್ಕು ಪತ್ರ ಕೊಡಬೇಕು
   - ಅದರಲ್ಲೂ ಮುಖ್ಯವಾಗಿ ಎಲ್ಲಾ ಆದಿವಾಸಿಗಳಿಗೆ ಭೂಮಿ ಮತ್ತು ಶಾಶ್ವತ ಹಕ್ಕು ಪತ್ರ ನೀಡಬೇಕು ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು
   - ಕೃಷಿ ಯೋಗ್ಯ ಪಾಳು ಭೂಮಿಯನ್ನು ಭೂಹೀನರಿಗೆ ಹಂಚಬೇಕು
2. ಆಹಾರ ಬೆಳೆ ಅದರಲ್ಲೂ ಮುಖ್ಯವಾಗಿ ಭತ್ತ ಬೆಳೆಯುವ ರೈತರ ಸಮಸ್ಯೆಗಳನ್ನು ತಕ್ಷಣವೇ ಬಗೆಹರಿಸಿ, ಸರ್ಕಾರ ಅವರಿಗೆ ಸಂಪೂರ್ಣ ಬೆಂಬಲವಾಗಿರಬೇಕು
3. ಕಸ್ತೂರಿ ರಂಗನ್ ವರದಿಯನ್ನು ರದ್ದುಗೊಳಿಸಬೇಕು
4. ಪಶ್ಚಿಮ ಘಟ್ಟದಲ್ಲಿ ಟೂರಿಸಂ ಮುಂತಾದ ಮೂಲಕ ಪರಿಸರ ನಾಶ ಮಾಡುವುದನ್ನು ನಿಲ್ಲಿಸಬೇಕು
5. ನಿರುದ್ಯೋಗಿ ಯುವ ಜನಾಂಗಕ್ಕೆ ಅವರ ಅರ್ಹತೆಗೆ ತಕ್ಕಂತೆ ಸರ್ಕಾರಿ ಉದ್ಯೋಗ ಕೊಡಬೇಕು ಅದರಲ್ಲೂ ದಲಿತ ಮತ್ತು ಆದಿವಾಸಿಗಳಿಗೆ ಆದ್ಯತೆ ಮೇರೆಗೆ ಕೊಡಬೇಕು
6. ಆದಿವಾಸಿಗಳಿಗೆ ಹಾಕಿರುವ ಮೇಲಿನ ಎಲ್ಲ ಕೇಸುಗಳು [illegible] ಅವರಿಗೆ [illegible] [illegible]

7. ಸಾಂಸ್ಕೃತಿಕವಾಗಿ ಬರುತ್ತಿರುವ ಬದಲಾವಣೆಗಳ ಪರಿಣಾಮದಿಂದ ಮಹಿಳೆಯರ ಮೇಲೆ ಆಗುತ್ತಿರುವ ಎಲ್ಲ ರೀತಿಯ ದೌರ್ಜನ್ಯವನ್ನು ತಡೆಯಲು ಅದಕ್ಕೆ ಸೂಕ್ತ ರೀತಿಯ ಕ್ರಮ ಕೈಗೊಳ್ಳಬೇಕು ಮತ್ತು ಮನರಂಜನೆಗಾಗಿ ನಡೆಸುವ ಕ್ರಮಗಳನ್ನು ನಿಲ್ಲಿಸಬೇಕು.
8. ಹವಾಮಾನ ಬದಲಾವಣೆಯಿಂದ ಬರುತ್ತಿರುವ ಕೃಷಿ ಬೆಳೆ, ಮನುಷ್ಯನ ಆರೋಗ್ಯದ ಮೇಲೆ ಮತ್ತು ಪ್ರಕೃತಿಯ ಮೇಲೆ ಬೀಳುತ್ತಿರುವ ಪರಿಣಾಮದ ಬಗ್ಗೆ ಜನರಿಗೆ ವೈಜ್ಞಾನಿಕ ಎಂಬ ಕಾರಣವನ್ನು ಅರ್ಥ ಪಡಿಸಬೇಕು ಮತ್ತು ಅದನ್ನು ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳಬೇಕು.
9. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ರದ್ದಾಗಬೇಕು
   - ಇಲ್ಲಿ ವಾಸಿಸುತ್ತಿರುವ ಜನರನ್ನು ಒಕ್ಕಲೆಬ್ಬಿಸಬಾರದು
   - ಅವರಿಗೆ ಎಲ್ಲ ಮೂಲಭೂತ ಸೌಲಭ್ಯಗಳನ್ನು ಅಲ್ಲಿಯೇ ಒದಗಿಸಬೇಕು.
10. ಮೂರು ರಾಜ್ಯಗಳಲ್ಲೂ ಒಕ್ಕಲೆಬ್ಬಿಸುವ ಎಲ್ಲ ಕ್ರಮಗಳನ್ನು ನಿಲ್ಲಿಸಬೇಕು.
11. ಬಡ ಮತ್ತು ಮಧ್ಯಮ ವರ್ಗದ ರೈತರ ಒತ್ತುವರಿ ಭೂಮಿಯನ್ನು ತೆರವುಗೊಳಿಸಬಾರದು.
12. ಅಡಿಕೆಗೆ ಬರುತ್ತಿರುವ ಎಲೆಚುಕ್ಕೆ ರೋಗ ಮತ್ತು ಇತರ ಬೆಳೆಗಳಿಗೆ ಬರುತ್ತಿರುವ ರೋಗಗಳ ಬಗ್ಗೆ ಸಂಶೋಧನೆ ನಡೆಸಿ ರೋಗವನ್ನು ತಡೆಗಟ್ಟಲು ಸರ್ಕಾರ ಪ್ರಯತ್ನಿಸಬೇಕು. ಹಾಗೂ, ಬೆಳೆ ನಷ್ಟವಾದ ರೈತರಿಗೆ ಸೂಕ್ತ ಪರಿಹಾರವನ್ನು ತಕ್ಷಣವೇ ಕೊಡಬೇಕು.
13. ಆದಿವಾಸಿ ಹಕ್ಕುಗಳಲ್ಲಿ ಅಕಾಲಿಕವಾಗಿ ಮರಣ ಹೊಂದುತ್ತಿರುವ ಜನರ ಕುರಿತು ತಕ್ಷಣವೇ ಸೂಕ್ತ ರೀತಿಯಲ್ಲಿ ಸಂಶೋಧನೆ ನಡೆಸಿ ಚಿಕಿತ್ಸೆ ಒದಗಿಸಿ ಪರಿಹರಿಸಬೇಕು. ಮತ್ತು 2025ರ ನಂತರ ಮರಣ ಹೊಂದಿದ್ದವರ ಕುಟುಂಬಗಳಿಗೆ ಸೂಕ್ತ ರೀತಿಯ ಪರಿಹಾರ ಕೊಡಬೇಕು. ಅಲ್ಲದೆ, ಮಹಿಳೆಯರಿಗೆ ಬರುತ್ತಿರುವ ಗರ್ಭಕೋಶ ಸಂಬಂಧಿತ ಕಾಯಿಲೆಗೆ ಸೂಕ್ತ ರೀತಿಯಲ್ಲಿ ಸಂಶೋಧನೆ ನಡೆಸಿ ಪರಿಹರಿಸಬೇಕು ಇದಕ್ಕೆ ಕಾರಣ ಕೊರೊನಾ ವ್ಯಾಕ್ಸಿನ್ ಸಮಸ್ಯೆಯಾ ಎಂಬುದರ ಬಗ್ಗೆ ಸಂಶೋಧನೆ ನಡೆಸಬೇಕು.
14. ನಮ್ಮ ಪಕ್ಷದ ಡಿಸಿಎಂ ಸದಸ್ಯರಾದ ಕಾಮ್ರೆಡ್ ವಿಕ್ರಮ್ ಗೌಡ ಅವರನ್ನು ನವೆಂಬರ್ 18/2024ರಂದು ಸಂಜೆ 6:30 ಗಂಟೆಯ ಸಮಯದಲ್ಲಿ ಮಬಿನೆಯವರ ಸಹಾಯದಿಂದ ಮನೆ ಒಳಗೆ ಕೈಗೆಟಕುವ ಅಂತರದಲ್ಲಿ ಎಎನ್‌ಎಫ್ ಪಡೆ ಕ್ರೂರವಾಗಿ ಗುಂಡಿನ ಸುರಿಮಳೆಗರೆದು ಹತ್ಯೆಗೈದಿದ್ದಾರೆ. ಇದರ ಬಗ್ಗೆ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು
15. ಮೂರು ರಾಜ್ಯಗಳ ಜೈನಲ್ಲಿರುವ ನಮ್ಮ ಎಲ್ಲ ಕಾಮ್ರೆಡ್‌ಗಳ ಕೇಸುಗಳನ್ನು ಶೀಘ್ರವಾಗಿ ಮುಗಿಸಬೇಕು ಅವರನ್ನು ಬಿಡುಗಡೆಗೊಳಿಸಬೇಕು.
16. ಆದಿವಾಸಿ ಮುಗ್ಧ ಮಹಿಳೆಯರಾದ ಶೋಭಾ, ಕನ್ಯಾಕುಮಾರಿ, ಸಾವಿತ್ರಿ, ಶ್ರೀಮತಿ ಇವರ ಮೇಲಿನ ಕೇಸುಗಳನ್ನು ಶೀಘ್ರವೇ ಮುಗಿಸಿ ಅವರಿಗೂ ನಕ್ಸಲ್ ಪ್ಯಾಕೇಜಿನಡಿಯಲ್ಲಿ ಪುನರ್ವಸತಿ ಮತ್ತು ಸಹಾಯಧನವನ್ನು ಕಲ್ಪಿಸಬೇಕು.

17. ಆಯಾ ಪ್ರದೇಶಗಳಲ್ಲಿ ಸ್ಥಳೀಯವಾಗಿ ಬೆಳೆಯುತ್ತಿರುವ ಅಕ್ಕಿಯನ್ನು ರೇಷನ್ ಕಾರ್ಡಿನ ಅಕ್ಕಿಯಾಗಿ ವಿತರಿಸಬೇಕು.

18. ಮುಖ್ಯವಾಹಿನಿಗೆ ಬಂದು 15 ದಿನಗಳೊಳಗೆ ನಮ್ಮ ಎಲ್ಲ ಕಾಮ್ರೇಡ್‌ಗಳ ಆರೋಗ್ಯ ಸಮಸ್ಯೆಗಳಿಗೆ ಸೂಕ್ತ ರೀತಿಯ ಚಿಕಿತ್ಸೆ ಕೊಡಿಸಬೇಕು

ಧನ್ಯವಾದಗಳೊಂದಿಗೆ,

ಮುಂಡಗಾರು ಲತಾ,

ವನಜಾಕ್ಷಿ,

ಸುಂದರಿ,

ಜೀಶ,

ವಸಂತ ಕೆ,

ಮಾರೆಪ್ಪ ಅರೋಲಿ

# ಅನುಬಂಧ - 2

## ರಾಜ್ಯದಲ್ಲಿ ಈವರೆಗೆ ಶರಣಾಗತರಾಗಿರುವ ನಕ್ಸಲರ ವಿವರಗಳು

| ಕ್ರ. ಸಂ | ಶರಣಾಗತ ನಕ್ಸಲರ ವಿವರ | ಶರಣಾಗತರಾದ ದಿನಾಂಕ ಮತ್ತು ಸ್ಥಳ | ಕೆಟಗರಿ | ಪಡೆದುಕೊಂಡ ಅನುದಾನ |
|---|---|---|---|---|
| 1. | Hagalaganji Venkatesh @ Gangamoola Venkatesh, S/o Late Chandre Gowda, 48 years, Caste: Gowdlu, Hagalaganji, Ginukal village, Sringeri Chikkamagalur | 29/09/2010 & Chikkamagalur District Administration | RED | Rs. 1 lakh |
| 2. | Komala @ YadagundaKomala, D/o LateTimme Gowda, 41 Years, Caste: Gowdlu, Yadagunda, MegundaHobli, Koppa Taluk, Chikkamagalur | 15/10/2010 & Chikkamagalur District Administration | GREEN | Rs.50,000 Cash |
| 3. | Jaya @ Ranjitha D/o Gidde Gowda, 45 years, Caste: Gowdlu, Varle, Meguru village and post, Megundahobli, Koppa Taluk, Chikkamagalur | 29/09/2010 & Chikkamagalur District Administration | GREEN | Rs.50,000 Cash |
| 4. | Mallika @ Kavitha, D/o Late Athiyappa, 44 Years, Okkaliga, Kunduramani, Yalimadalu village, DurgadaBettu post, Koppa Taluk, Chikkamagalur. Present Address: Rented house at Jayapura, Near Kannikaparameshwari Temple. | 29/09/2010 & Chikkamagalur District Administration | GREEN | Rs.50,000 Cash & Attender job at Sringeri Taluk office |
| 5. | Krishna @ Koranakote Krishna, S/o Late Puttappa, 49 years, Adi Karnataka, Hurli village, Koranakote, Hosanagara Taluk, Shivamogga. Present Address: #21/1, 4th Cross, Ashraya Badavane, BommanaKatte, Shivamogga. | 04/05/2011 & Chikkamagalur District Administration | RED | • Rs. 1 lakh&Ashraya house |
| 6. | Sirimane Nagaraj, S/o Ramaiah, 68 years,Brahmin, Sirimane, Kigga village, Sringeri, Chikkamagalur. Present address: #28/102, Olagerahalli Main Road, KengeriUpanagara, Near Satellite bus stand, Bengaluru | 08/12/2014 & Chikkamagalur District Administration | "B" | Refused |
| 7. | Noor Julfiqar C.M @ Shridhar, S/o Abdul Munna Sab, 61 years, Muslim, Sri Siddappa Kambali Road, HDMC Campus,Commissioners Bungalow, Hubli.<br><br>Present address: Venkatappa Layout, Near stmary's church,Kethaganahalli village, Bidadi, Bengaluru | 08/12/2014 & Chikkamagalur District Administration | "A" | Refused |
| 8. | NilaguliPadmanabha @ Paddanna, S/o Late Nemi Achar, 54 Years, Caste: Vishwakarma, Nilguli, Somalapura village, Koppa, Chikkamagalur. | 14/11/2016 & Chikkamagalur District Administration | "A" | Rs. 2.5 lakh |
| 9. | Rizwana Begum D/o Syed Ismail Sab, 41 years, Muslim, KortaKunda village, Raichur. Present address: #52/2, 9thMain road, 9th main, Near Kaveri Gnana Mithra School, Marathalli, Bengaluru. | 14/11/2016 & Chikkamagalur District Administration | "A" | Rs. 2.5 lakh |
| 10. | Parashuram @ Raju, S/o Jakkappa, 48 years, Present address: #52/2, 9thMain road, 9th main, Near Kaveri Gnana Mithra School, Marathalli, Bengaluru. | 14/11/2016 & Chikkamagalur District Administration | "B" | NIL |

| | | | | |
|---|---|---|---|---|
| 11. | Bharathi @ Renuka, D/o Narayanappa, 46 years, Adi Karnataka, Bangarapete, Gangammana Palya, Kolar district. Present address: Nilguli, Somalapura village, Koppa, Chikkamagalur. | 14/11/2016 & Chikkamagalur District Administration | "B" | NIL |
| 12. | Kanyakumari @ Suvarna, D/o Late Timme Gowda, 41 years, Caste: Gowdlu, Jarimane Aluvalli, Mavinakere, Mudigere Taluk, Chikkamagalur. | 05/06/2017 & Chikkamagalur District Administration | "A" | Rs. 2.5 lakh |
| 13. | Chennamma @ Suma, D/o Honnappa Jalagar, 44 years, Caste: Ambiga, Hammigi village, Mundaragi Taluk, Gadag district. Present address: #9, Straight Road, 9th cross, Jakkasandra, Bengaluru. | 05/06/2017 & Chikkamagalur District Administration | "B" | NIL |
| 14. | Shivu @ Jnanadev, S/o Late Gangadhar, 41 years, Weavers colony, Gottekere, Country Club, Bannerghatta Road, Bengaluru-83 | 05/06/2017 & Chikkamagalur District Administration | "B" | NIL |
| 15. | John @ Jayanna Marappa S/o Late Dodda Mahadevappa, Age 51, Caste SC, Dr. B.R. Ambedkar Circle, Arolli village, Manvi Taluk, Raichur district | 08/01/2025 & State Committee Bengaluru | "A" | 1st stage – Rs. 3 lakh |
| 16. | Mundagaru Latha, D/O Putte Gowda, Age 44, Caste: Gowdlu, Mundagaru Village, Sringeri Taluk, Chikkamagalore dist. | 08/01/2025 & State Committee Bengaluru | "A" | 1st stage – Rs. 3 lakh |
| 17. | Sundari @ Geetha, D/o Babu Malekudiya, Age 40, Caste: Gowdlu, Kotyantadka mane, Kuthlur, Belthangady Taluk, Dakshina Kannada district. | 08/01/2025 & State Committee Bengaluru | "A" | 1st stage – Rs. 3 lakh |
| 18. | Vanajakshi M, D/o Late Manjunath Gowda, Age 56, Bhadra, Caste: Gowdlu, Site, Balehole, KalasaHobli, Mudigere Taluk, Chikkamagalur District | 08/01/2025 & State Committee Bengaluru | "A" | 1st stage – Rs. 3 lakh |
| 19. | K Vasanth Ranipete, Velluru District, Tamil nadu State. | 08/01/2025 & State Committee Bengaluru | "A" | 1st stage – Rs. 3 lakh |
| 20. | T.N Jisha Attimala Village, Talapuzha, Wayanad District, Kerala State. | 08/01/2025 & State Committee Bengaluru | "A" | 1st stage – Rs. 3 lakh |
| 21. | Ravindra @ Kote Honda Ravindra, S/o Subbu Naik, Age: 43yrs Caste: Marathi Naik, Hittalamane Kodige, Marati colony, Hulugarubylu, Kigga, Sringeri Taluk, Chikkamagaluru District. | 01/02/2025 & Chikkamagalur District Administration | "A" | 1st stage – Rs. 3 lakh |
| 22. | Tombattu Laxmi, D/o: PunjaPoojari, Age: 40 yrs, Caste: Poojari Irkigadde, Tombattu, Machattu Village, Kundapura Taluk, Udupi District. | 02/02/2025 & Udupi District Administration | "A" | 1st stage – Rs. 3 lakh |

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶರಣಾಗತರಾಗಿ ಸಮಾಜದ ಮುಖ್ಯವಾಹಿನಿಗೆ ಬರುವ ನಕ್ಸಲರಿಗೆ ಶರಣಾಗತಿ ಮತ್ತು ಪುನರ್ವಸತಿ ಯೋಜನೆಯಡಿ ಪ್ರೋತ್ಸಾಹಧನ/ಸಹಾಯಧನವನ್ನು ಮಂಜೂರು ಮಾಡುವ ಕುರಿತು.

ಓದಲಾಗಿದೆ :1) ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 128 ಎಸ್‌ಎಸ್‌ಟಿ 2010 (ಪಿ-1), ದಿನಾಂಕ: 19.01.2015.

2) ಎಡಿಜಿಪಿ (ಕಾ&ಸು), ಡಿಜಿ & ಐಜಿಪಿ ರವರ ಕಾರ್ಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಾ&ಸು/ಟಿ.ಎಸ್.ಸಿ-2/57/2016-17, ದಿನಾಂಕ: 07.10.2023, 29.11.2023 & 06.01.2024.

-------

**ಪ್ರಸ್ತಾವನೆ:**

ಕರ್ನಾಟಕ ರಾಜ್ಯದ ಹಲವು ಪ್ರದೇಶಗಳಲ್ಲಿ, ಅದರಲ್ಲೂ ಪ್ರಮುಖವಾಗಿ ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ನಕ್ಸಲ್ ಚಳುವಳಿ/ಎಡಪಂಥೀಯ/ತೀವ್ರಗಾಮಿ ಚಟುವಟಿಕೆಗಳು ಸಕ್ರಿಯವಾಗಿರುವುದು ಕಂಡುಬಂದಿರುತ್ತವೆ. ಅಂತಹ ಪ್ರದೇಶಗಳಲ್ಲಿ ನಿರುದ್ಯೋಗ, ಅಸಮಾನತೆಗಳ ಜೊತೆಗೆ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುತ್ತದೆಂಬ ಅಪಪ್ರಚಾರವು ನಿರುದ್ಯೋಗಿ ಯುವಕರನ್ನು ನಕ್ಸಲ್ ಸಿದ್ಧಾಂತ/ಎಡಪಂಥೀಯ ಭಯೋತ್ಪಾದನೆ ಕಡೆಗೆ ಆಕರ್ಷಿತರಾಗುವಂತೆ ಮಾಡಿರುತ್ತದೆ. ರಾಜ್ಯ ಸರ್ಕಾರವು ಇಂತಹ ಚಟುವಟಿಕೆಗಳಲ್ಲಿ ತೊಡಗಿರುವ ಯುವಕರುಗಳನ್ನು ಸಮಾಜದ ಮುಖ್ಯವಾಹಿನಿಗೆ ತರಲು ನಿರಂತರವಾಗಿ ಶ್ರಮಿಸುತ್ತಿದೆ. ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ಶರಣಾಗತರಾಗಿ ಸಮಾಜದ ಮುಖ್ಯ ವಾಹಿನಿಗೆ ಬರುವ ನಕ್ಸಲರಿಗೆ ನೀಡಬೇಕಾದ ಪ್ರೋತ್ಸಾಹಧನ/ಸಹಾಯಧನ ಹಾಗೂ ಪುನರ್ವಸತಿ ಸೌಲಭ್ಯಗಳನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ. ಇಂತಹ ಪ್ರೋತ್ಸಾಹದಿಂದಾಗಿ ಭೂಗತರಾಗಿದ್ದ ಮಹಿಳೆಯರನ್ನೂ ಒಳಗೊಂಡಂತೆ 14 ಜನ ನಕ್ಸಲರು ಸರ್ಕಾರ/ಜಿಲ್ಲಾಡಳಿತದ ಮುಂದೆ ಈವರೆಗೆ ಶರಣಾಗತರಾಗಿದ್ದಾರೆ. ಜಿಲ್ಲಾಡಳಿತವು ಇವರುಗಳ ಪುನರ್ವಸತಿಗಾಗಿ ಧನಾತ್ಮಕವಾಗಿ ಮತ್ತು ಪರಿಣಾಮಕಾರಿಯಾಗಿ ಸ್ಪಂದಿಸಿರುತ್ತದೆ.

**ಈ ಯೋಜನೆಯ ಉದ್ದೇಶಗಳು:-**

1. ಎಡಪಂಥೀಯ ತೀವ್ರಗಾಮಿಗಳ ವಾಪಸಾತಿಯನ್ನು ಸುಲಭಗೊಳಿಸುವುದು ಮತ್ತು ಎಡಪಂಥೀಯ ತೀವ್ರಗಾಮಿಗಳ ಹಿಂಸಾಚಾರವನ್ನು ದೂರವಿಡುವ/ದಾರಿ ತಪ್ಪಿದ ಯುವಕರು ಮತ್ತು ಎಡಪಂಥೀಯ ತೀವ್ರಗಾಮಿಗಳ ಬಲೆಗೆ ಸಿಲುಕಿರುವ ಹಾರ್ಡ್‌ಕೋರ್ ನಕ್ಸಲರನ್ನು ತಡೆಯುವುದು. ಈ ಯೋಜನೆಯು ಶರಣಾದ ನಕ್ಸಲರಿಗೆ ಲಾಭದಾಯಕ ಉದ್ಯೋಗ ಮತ್ತು ಉದ್ಯಮಶೀಲತೆಯ ಅವಕಾಶಗಳನ್ನು ಒದಗಿಸುವ ಮೂಲಕ, ಮತ್ತೆ ಉಗ್ರವಾದಕ್ಕೆ ಮರಳದಂತೆ ಖಚಿತಪಡಿಸಿಕೊಳ್ಳಲು

ಪ್ರಯತ್ನಿಸುತ್ತದೆ. ಈ ಯೋಜನೆಯಡಿಯಲ್ಲಿ ಸರ್ಕಾರದ ಪ್ರಯೋಜನಗಳಲ್ಲಿ ತಮ್ಮ ಆಸಕ್ತಿಯನ್ನು ಹೆಚ್ಚಿಸಿಕೊಂಡು ಸರ್ಕಾರದ ಎದುರು ನಕ್ಸಲರು ಶರಣಾಗುವಂತೆ ಮಾಡಲು ಪ್ರೋತ್ಸಾಹಿಸಲಾಗುತ್ತದೆ.

2. ಸರ್ಕಾರವು ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಸಮಾಜದ ಹಿಂದುಳಿಯುವಿಕೆಯ ಕಾರಣಗಳನ್ನು ಗುರುತಿಸಿ, ಅಭಿವೃದ್ಧಿ ಕಾರ್ಯಗಳು ಅಂದರೆ, ಶಿಕ್ಷಣ, ಆರೋಗ್ಯ, ರಸ್ತೆ, ಕುಡಿಯುವ ನೀರು, ವಿದ್ಯುದ್ದೀಪ, ಉದ್ಯೋಗಾವಕಾಶಗಳು, ಕೌಶಲ್ಯ ತರಬೇತಿ ಮೊದಲಾದವುಗಳನ್ನು ನೀಡುವುದರೊಂದಿಗೆ ಆ ಭೂ ಪ್ರದೇಶಗಳ ಅಭಿವೃದ್ಧಿಗೆ ಶ್ರಮಿಸುತ್ತಿದೆ.

3. ಈ ಹಿಂದೆ ಇದ್ದ ನಕ್ಸಲ್ ಶರಣಾಗತಿ ಯೋಜನೆಯನ್ನು ಉನ್ನತೀಕರಿಸುವುದರಿಂದ, ಹೆಚ್ಚಿನ ಸಂಖ್ಯೆಯ ನಕ್ಸಲರು/ಎಡಪಂಥಿಯ ಭಯೋತ್ಪಾದಕರು ಶರಣಾಗತರಾಗಿ, ಸಮಾಜದ ಮುಖ್ಯ ವಾಹಿನಿಗೆ ಬರಲು ಸಹಾಯವಾಗುತ್ತದೆ. ಈ ಯೋಜನೆಯಿಂದ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಯೋಜನೆಗಳಿಗೆ ಸಹಕಾರಿಯಾಗಲಿದೆ.

ಮೇಲೆ ಓದಲಾದ (2)ರ ದಿನಾಂಕ:29.11.2023 ಹಾಗೂ 06.01.2024ರ ಪತ್ರದಲ್ಲಿ ಡಿಜಿ & ಐಜಿಪಿ ರವರು ಶರಣಾಗತಿಯಾದ ನಕ್ಸಲರಿಗೆ ರಾಜ್ಯ ಸಮಿತಿಗೆ ಉಪ ನಿರ್ದೇಶಕರು, ಕೌಂಟರ್ ಇಂಟಲಿಜೆನ್ಸ್, ರಾಜ್ಯ ಗುಪ್ತವಾರ್ತೆ ಇವರನ್ನು ಸದಸ್ಯರನ್ನಾಗಿ ಸೇರಿಸಿ, ರಾಜ್ಯ ಮಟ್ಟ ಮತ್ತು ಜಿಲ್ಲಾ ಮಟ್ಟದ ಸಮಿತಿಗಳನ್ನು ಪುನರ್‌ರಚಿಸುವಂತೆ ಮತ್ತು ಶರಣಾಗತರಾದವರು ವ್ಯಾಪಾರ ಅಥವಾ ವೃತ್ತಿ ನಡೆಸಲು ಒಲವು ತೋರಿಸಿದ್ದಲ್ಲಿ, ಆ ಬಗ್ಗೆ ಕೌಶಲ್ಯ ತರಬೇತಿ ಪಡೆಯಲು ಇಚ್ಛಿಸಿದ್ದಲ್ಲಿ, ಮಾನ್ಯತೆ ಪಡೆದ ತರಬೇತಿ ಸಂಸ್ಥೆಗೆ ದಾಖಲಾದ ನಂತರ ಅವರಿಗೆ ತಿಂಗಳಿಗೆ ರೂ.5000/- ಗಳ ಪ್ರೋತ್ಸಾಹ ಧನವನ್ನು ಈ ಸೌಲಭ್ಯವನ್ನು ಗರಿಷ್ಠ ಒಂದು ವರ್ಷದಿಂದ ಎರಡು ವರ್ಷಗಳಿಗೆ ಹೆಚ್ಚಿಸುವಂತೆ, ಇದೇ ರೀತಿಯ ಸೌಲಭ್ಯವನ್ನು ಔಪಚಾರಿಕ ಶಿಕ್ಷಣ (Formal Education) ಪಡೆಯಲು ಪ್ರಯತ್ನಿಸುವವರಿಗೂ ಎರಡು ವರ್ಷಗಳ ಅವಧಿಯನ್ನು ಮೂರು ವರ್ಷಗಳಿಗೆ ವಿಸ್ತರಿಸುವಂತೆ ಹಾಗೂ ಈ ಹಿಂದೆ 2015ರಲ್ಲಿ ಹೊರಡಿಸಿರುವ ಆದೇಶದಲ್ಲಿ ಒಂದೇ ಪ್ರವರ್ಗದಲ್ಲಿ Composite grant-cum-loan ಅಡಿ ರೂ.5.00 ಲಕ್ಷಗಳನ್ನು ನಿಗದಿಪಡಿಸಿ ಆದೇಶಿಸಲಾಗಿದ್ದ ಪ್ರೋತ್ಸಾಹ ಧನವನ್ನು ಪ್ರಸ್ತುತ ಎ, ಬಿ & ಸಿ 03 ಶ್ರೇಣಿಗಳಲ್ಲಿ ಈ ಕೆಳಕಂಡಂತೆ ಹೆಚ್ಚಿಸುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರವರ್ಗ-ಎ ರಲ್ಲಿ ರೂ.10.00 ಲಕ್ಷ,
ಪ್ರವರ್ಗ-ಬಿ ರಲ್ಲಿ ರೂ.5.00 ಲಕ್ಷ
ಪ್ರವರ್ಗ-ಸಿ ರಲ್ಲಿ ರೂ.2.00 ಲಕ್ಷ.

ಈ ಮೇಲಿನ ಪ್ರಸ್ತಾವನೆಯಲ್ಲಿನ ವಿವರಿಸಿದ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಪರಿಷ್ಕೃತ ಆದೇಶವನ್ನು ಹೊರಡಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 402 ಎಸ್‌ಎಸ್‌ಟಿ 2023(1),**

**ಬೆಂಗಳೂರು, ದಿನಾಂಕ:14.03.2024**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 128 ಎಸ್‌ಎಸ್‌ಟಿ 2010 (ಪಿ-1), ದಿನಾಂಕ:19.01.2015 ರಲ್ಲಿನ ಯೋಜನೆಯನ್ನು ಉನ್ನತೀಕರಿಸಿ, ಶರಣಾಗತರಾಗುವ ನಕ್ಸಲರಿಗೆ/ಎಡಪಂಥೀಯ ಭಯೋತ್ಪಾದಕರಿಗೆ ಪುನರ್ವಸತಿ ಕಲ್ಪಿಸುವ ಯೋಜನೆಯನ್ನು ಈ ಕೆಳಗಿನಂತೆ ಮಾರ್ಪಾಡು ಮಾಡಲಾಗಿದೆ.

1. **ವ್ಯಾಖ್ಯೆ:**

ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಆಕ್ಟ್-1908 ಮತ್ತು ಭಾರತ ಸರ್ಕಾರದ ಯು.ಎ.ಪಿ. ಆಕ್ಟ್-1967 ರಲ್ಲಿ ವಿವರಿಸಿರುವ ಭಯೋತ್ಪಾದಕರು/ತೀವ್ರಗಾಮಿಗಳು/ತೀವ್ರಗಾಮಿ ಚಟುವಟಿಕೆ/ತೀವ್ರಗಾಮಿ ಗುಂಪು/ ತೀವ್ರಗಾಮಿ ಸಂಘಟನೆಗಳ ವ್ಯಾಖ್ಯೆಯನ್ನೆ ಇಲ್ಲಿಯೂ ಅನ್ವಯಿಸಿಕೊಳ್ಳುವುದು.

ಎ. ರಾಜ್ಯ ಸರ್ಕಾರ ಎಂದರೆ, ಕರ್ನಾಟಕ ಸರ್ಕಾರ.

ಬಿ. "ಅವನು" ಅಥವಾ "ಅವನ" ಉಲ್ಲೇಖವು "ಅವಳು" ಅಥವಾ "ಅವಳ" ಎಂಬ ಅರ್ಥವನ್ನು ಒಳಗೊಂಡಿರುತ್ತದೆ.

2. **ಅರ್ಹತೆಗಳು:**

ಈ ಯೋಜನೆಯು, ಕೇವಲ ತೀವ್ರಗಾಮಿಗಳು/ನಕ್ಸಲರು/ಎಡಪಂಥೀಯ ಭಯೋತ್ಪಾದಕರ ಬೆಂಬಲಿಗರು, ಎಡಪಂಥೀಯ ಸಂಘಟನೆಗಳಿಗೆ ಸಂಬಂಧಿಸಿದ ಕಾರ್ಯಕರ್ತರುಗಳಿಗೆ ಮಾತ್ರ ಅನ್ವಯಿಸುತ್ತದೆ. ಮೇಲೆ ಹೇಳಿದ ಚಟುವಟಿಕೆಗಳಲ್ಲಿ ಭಾಗಿಯಾದವರು ತಮ್ಮ ಬಳಿ ಇರುವ ಶಸ್ತ್ರಗಳ ಸಹಿತವಾಗಿ ಅಥವಾ ರಹಿತವಾಗಿ ಶರಣಾಗಬಹುದು. ಅಂತಹವರುಗಳನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

**ಪ್ರವರ್ಗ-ಎ:** ಮೇಲೆ ಹೇಳಿದ ಸಂಘಟನೆಗಳ ಸದಸ್ಯರಾಗಿ ಗುರುತಿಸಿಕೊಂಡಿದ್ದು, ಭೂಗತರಾಗಿ ಶಸ್ತ್ರ ಸಜ್ಜಿತ ಗುಂಪಿನ ಸದಸ್ಯರಾಗಿದ್ದು, ಸೆಂಟ್ರಲ್ ಕಮಿಟಿ, ರೀಜನಲ್ ಕಮಿಟಿ, ರಾಜ್ಯ ಸಮಿತಿ, ಜಿಲ್ಲಾ ಸಮಿತಿ ಮತ್ತು ಏರಿಯಾ ಸಮಿತಿಗಳಲ್ಲಿ ಯಾವುದಾದರೂ ಒಂದು ಅಥವಾ ಹೆಚ್ಚಿನ ಕಮಿಟಿಗಳ ಸದಸ್ಯರಾಗಿ ಸಕ್ರಿಯವಾಗಿರುವ ಮತ್ತು ಅಂತಹವರ ವಿರುದ್ಧ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಕ್ರಿಮಿನಲ್ ಮೊಕದ್ದಮೆಗಳನ್ನು ಹೊಂದಿರುವ ಸ್ಥಳೀಯ, ಅಂದರೆ ಕರ್ನಾಟಕದಲ್ಲಿ ಜನಿಸಿದವರು/ಕರ್ನಾಟಕದಲ್ಲಿ ನಿವಾಸ ಹೊಂದಿರುವವರು.

**ಪ್ರವರ್ಗ-ಬಿ:** ಮೇಲೆ ಹೇಳಿದ ಸಂಘಟನೆಗಳ ಸದಸ್ಯರಾಗಿ ಗುರುತಿಸಿಕೊಂಡಿದ್ದು, ಭೂಗತರಾಗಿ ಶಸ್ತ್ರ ಸಜ್ಜಿತ ಗುಂಪಿನ ಸದಸ್ಯರಾಗಿದ್ದು, ಸೆಂಟ್ರಲ್ ಕಮಿಟಿ, ರೀಜನಲ್ ಕಮಿಟಿ, ರಾಜ್ಯ ಸಮಿತಿ, ಜಿಲ್ಲಾ ಸಮಿತಿ ಮತ್ತು ಏರಿಯಾ ಸಮಿತಿಗಳಲ್ಲಿ ಯಾವುದಾದರೂ ಒಂದು ಅಥವಾ ಹೆಚ್ಚಿನ ಕಮಿಟಿಗಳ ಸದಸ್ಯರಾಗಿ ಸಕ್ರಿಯವಾಗಿರುವ ಮತ್ತು ಅಂತಹವರ ವಿರುದ್ಧ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಕ್ರಿಮಿನಲ್

ಮೊಕದ್ದಮೆಗಳನ್ನು ಹೊಂದಿರುವ ಪರಸ್ಥಳೀಯ ಅಂದರೆ ಕರ್ನಾಟಕದಲ್ಲಿ ಜನಿಸದೇ ಇರುವವರು/ಕರ್ನಾಟಕದಲ್ಲಿ ನಿವಾಸ ಹೊಂದದೇ ಇರುವವರು.

ಪ್ರವರ್ಗ-ಸಿ: ಎಡಪಂಥೀಯ ಭಯೋತ್ಪಾದನಾ ಸಂಘಟನೆಯ ಚಟುವಟಿಕೆಗಳನ್ನು ಬೆಂಬಲಿಸುವವರು, ಕೀಪರ್‌ಗಳು, ಕೊರಿಯರ್‌ಗಳು, ಮಾಹಿತಿದಾರರುಗಳು ಮತ್ತು ಈ ಸಂಘಟನೆಗೆ ನೇಮಕಾತಿಗಳನ್ನು ಮಾಡುವಂತಹ ವ್ಯಕ್ತಿಗಳೊಂದಿಗೆ ಸಂಪರ್ಕವನ್ನು ಹೊಂದಿದವರಾಗಿದ್ದು ಮೇಲೆ ಹೇಳಿದ ಪ್ರವರ್ಗ-1 ಅಥವಾ ಪ್ರವರ್ಗ-2 ರ ಅಡಿಯಲ್ಲಿ ಯಾವುದೇ ಕ್ರಿಮಿನಲ್ ಮೊಕದ್ದಮೆಗಳಲ್ಲಿ ತನ್ನ ವಿರುದ್ಧ ದೋಷಾರೋಪಣಾ ಪತ್ರವನ್ನು ಹೊಂದಿರುವವರು.

3. ಪ್ರಕ್ರಿಯೆಗಳು:-

(i) ನಕ್ಸಲರ ಶರಣಾಗತಿ ಮತ್ತು ಪುನರ್ವಸತಿಗೆ ಸಂಬಂಧಿಸಿದಂತೆ, LWE ಚಟುವಟಿಕೆಗಳಿಂದ ಬಾಧಿತವಾದ ಪ್ರತಿ ಜಿಲ್ಲೆಗಳಲ್ಲಿ ಈ ಕೆಳಗಿನಂತೆ ಜಿಲ್ಲಾ ಮಟ್ಟದ ಸಮಿತಿಗಳನ್ನು ರಚಿಸಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗಿದೆ.

| | | |
|---|---|---|
| 1 | ಜಿಲ್ಲಾ ದಂಡಾಧಿಕಾರಿ (ಜಿಲ್ಲಾಧಿಕಾರಿಗಳು) | ಅಧ್ಯಕ್ಷರು |
| 2 | ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯಿತಿ | ಸದಸ್ಯರು |
| 3 | ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ | ಸದಸ್ಯರು |
| 4 | ಜಿಲ್ಲಾ ಪೊಲೀಸ್ ಅಧೀಕ್ಷಕರು | ಸಂಚಾಲಕರು |

ನಕ್ಸಲ್ ಬಾಧಿತ ಪ್ರದೇಶಗಳಲ್ಲಿ ತಳಮಟ್ಟದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದ ಯಾರಾದರೂ ಒಬ್ಬ ಸಮಾಜದ/ಸಾಮಾಜಿಕ ಸಂಘಟನೆಯ ವ್ಯಕ್ತಿಯನ್ನು, ಜಿಲ್ಲಾ ದಂಡಾಧಿಕಾರಿಗಳು ಅಥವಾ ಜಿಲ್ಲಾ ಪೊಲೀಸ್ ಅಧೀಕ್ಷಕರನ್ನು ಮೇಲಿನ ಸಮಿತಿಗೆ ಸದಸ್ಯರನ್ನಾಗಿ ನೇಮಿಸಿಕೊಳ್ಳುವುದು.

(ii) ಈ ಹಿಂದೆ ಇದ್ದಂತಹ ನಕ್ಸಲ್ ಶರಣಾಗತಿ/ಪುನರ್ವಸತಿಗಾಗಿ ರಾಜ್ಯ ಮಟ್ಟದ ಸಮಿತಿಯಲ್ಲಿ ಹೊಸದಾಗಿ ಉಪನಿರ್ದೇಶಕರು ಕೌಂಟರ್ ಇಂಟೆಲಿಜೆನ್ಸ್, ರಾಜ್ಯ ಗುಪ್ತವಾರ್ತೆ ಯವರನ್ನು ಸೇರಿಸಿ, ನಕ್ಸಲ್ ಶರಣಾಗತಿ/ ಪುನರ್ವಸತಿಗಾಗಿ ಈ ಕೆಳಗಿನ ರಾಜ್ಯ ಮಟ್ಟದ ಸಮಿತಿಯನ್ನು ರಚಿಸಿದೆ.

| | | |
|---|---|---|
| 1 | ಮುಖ್ಯ ಕಾರ್ಯದರ್ಶಿಗಳು | ಅಧ್ಯಕ್ಷರು |
| 2 | ಗೃಹ ಕಾರ್ಯದರ್ಶಿಗಳು | ಸದಸ್ಯರು |
| 3 | ಡಿಜಿ ಮತ್ತು ಐಜಿಪಿ ಕರ್ನಾಟಕ | ಸದಸ್ಯರು |
| 4 | ಮುಖ್ಯಸ್ಥರು, ಆಂತರಿಕ ಭದ್ರತಾ ವಿಭಾಗ | ಸದಸ್ಯರು |
| 5 | ನಿರ್ದೇಶಕರು, ರಾಜ್ಯ ಗುಪ್ತವಾರ್ತೆ | ಸದಸ್ಯರು |
| 6 | ಡಿಐಜಿಪಿ, ನಕ್ಸಲ್ ನಿಗ್ರಹ ದಳ | ಸಂಚಾಲಕರು |

| | | |
|---|---|---|
| 7 | ಉಪನಿರ್ದೇಶಕರು, ಕೌಂಟರ್ ಇಂಟೆಲಿಜೆನ್ಸ್, ರಾಜ್ಯಗುಪ್ತವಾರ್ತೆ | ಸದಸ್ಯರು |
| 8 | ಮೂರು ಜನ ಸರ್ಕಾರೇತರ ಪ್ರಭಾವಶಾಲಿ ವ್ಯಕ್ತಿಗಳು, ಅದರಲ್ಲಿ ಒಬ್ಬರು ವಕೀಲರು | ಸದಸ್ಯರು |

ಪುನರ್ವಸತಿ ಯೋಜನೆಯನ್ನು ಯಶಸ್ವಿಗೊಳಿಸಲು ಶರಣಾಗತರಾಗುವ ಪ್ರತಿಯೊಬ್ಬ ವ್ಯಕ್ತಿಯು ಈ ಕೆಳಗಿನ ವಿಷಯಗಳಲ್ಲಿ ತೃಪ್ತಿದಾಯಕ ರೀತಿಯಲ್ಲಿ ಸಹಕರಿಸಬೇಕು.

i. ಅವನು ತನ್ನ ನಿಜವಾದ ಹೆಸರು, ಗುರುತು, ಚಟುವಟಿಕೆಗಳು, ತಾನು ಕ್ರಿಯಾಶೀಲವಾಗಿದ್ದ ಸಂಘಟನೆ/ಸಂಘಟನೆಗಳ, ಸದಸ್ಯರುಗಳ/ಕಾರ್ಯಕರ್ತರುಗಳ ಹೆಸರುಗಳನ್ನು ಬಹಿರಂಗಪಡಿಸಬೇಕು.

ii. ನಕ್ಸಲ್ ಸಂಘಟನೆಗೆ ಹಣಕಾಸು ಒದಗಿಸುವ ವ್ಯಕ್ತಿಗಳು ಮತ್ತು ಕೊರಿಯರ್‌ಗಳ ಮೂಲ ಹೆಸರುಗಳನ್ನು, ಈ ಸಂಘಟನೆಗೆ ಶಸ್ತ್ರಾಸ್ತ್ರಗಳ ಸರಬರಾಜಿನ ಮೂಲದ ಬಗ್ಗೆ ಬಹಿರಂಗಪಡಿಸಬೇಕು.

iii. ಅವನು ಈ ಹಿಂದೆ ತಾನು ಎಸಗಿದ ಕ್ರಿಮಿನಲ್ ಚಟುವಟಿಕೆಗಳ ಸಂಪೂರ್ಣ ಮಾಹಿತಿಗಳನ್ನು, ಅವನು ಭಾಗಿಯಾದ ಯಾವುದೇ ಹಿಂಸಾತ್ಮಕ ಘಟನೆಗಳಲ್ಲಿ ಭಾಗಿಯಾದವರ ಹೆಸರು, ಯೋಜಿಸಿದವರ ವಿವರಗಳು, ಬಳಸಿದ ಆಯುಧ/ಶಸ್ತ್ರಾಸ್ತ್ರಗಳ ವಿವರಗಳು. ಅಪಹರಿಸಿದ ವಸ್ತುಗಳು, ಶಸ್ತ್ರಾಸ್ತ್ರಗಳ ಹಂಚಿಕೆ, ವಸ್ತುಗಳ ವಿಲೇವಾರಿಗೆ ಸಂಬಂಧಿಸಿದ ಪೂರ್ಣ ವಿವರಗಳನ್ನು ಒದಗಿಸಬೇಕು.

iv. ಅವನು ಮಾಧ್ಯಮಗಳ ಮುಂದೆ ತಾನಾಗಿಯೇ ಸ್ವ-ಇಚ್ಛೆಯಿಂದ ಶರಣಾಗುತ್ತಿರುವುದಾಗಿ ಸಾರ್ವಜನಿಕ ಹೇಳಿಕೆಯನ್ನು ನೀಡಬೇಕು.

4. **ಕಾರ್ಯ ವಿಧಾನ:-**

ನಕ್ಸಲ್ ಬಾಧಿತ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಉಪಾಧೀಕ್ಷಕರ ಶ್ರೇಣಿಯ ಅಧಿಕಾರಿಯೊಬ್ಬರು, LWE ಗುಂಪು ಅಥವಾ ಅದರ ಸದಸ್ಯರ ಶರಣಾಗತಿಯ ಮತ್ತು ಮುಂದಿನ ಪುನರ್ವಸತಿ ಯೋಜನೆಗಳ ಪ್ರಸ್ತಾವನೆಯನ್ನು ಜಿಲ್ಲಾ ಶರಣಾಗತಿ ಮತ್ತು ಪುನರ್ವಸತಿ ಕಮಿಟಿಯ ಮುಂದೆ ನಿಗದಿತ ನಮೂನೆಯಲ್ಲಿ ಮಂಡಿಸಬೇಕು. ಈ ಪ್ರಸ್ತಾವನೆಯನ್ನು ಬೇರೆ ಶ್ರೇಣಿಯ ಅಧಿಕಾರಿಗಳು ಅಥವಾ ಸಾರ್ವಜನಿಕರು ಸಹ ಮಂಡಿಸಬಹುದು, ಆದರೆ, ಆ ಪ್ರಸ್ತಾವನೆಯು ನಕ್ಸಲ್ ಬಾಧಿತ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಉಪಾಧೀಕ್ಷಕರ ಶ್ರೇಣಿಯ ಅಧಿಕಾರಿಯ ಮುಖಾಂತರ ಮಂಡಿಸಬೇಕು.

ಒಂದು ವೇಳೆ, ಶರಣಾಗತಿ ಬಯಸುವ ವ್ಯಕ್ತಿಯು ಯಾವುದೇ ಹಿರಿಯ ಅಧಿಕಾರಿಗಳು ಅಥವಾ ಸಾರ್ವಜನಿಕ ಪ್ರತಿನಿಧಿಗಳು ಅಥವಾ ಜಿಲ್ಲಾ ಅಥವಾ ರಾಜ್ಯ ಶರಣಾಗತಿ ಸಮಿತಿಯ ಮುಂದೆ

ಪ್ರಸ್ತಾವನೆಯನ್ನು ಸಲ್ಲಿಸಿದಾಗ ಅದನ್ನು ನಕ್ಸಲ್ ಬಾಧಿತ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಉಪಾಧೀಕ್ಷಕರ ಶ್ರೇಣಿಯ ಅಧಿಕಾರಿಗೆ ಪರಿಶೀಲಿಸಿ ಪ್ರಸ್ತಾವನೆ ಸಲ್ಲಿಸಲು ಕಳುಹಿಸಿಕೊಡಬೇಕು.

ಒಂದು ವೇಳೆ ಸ್ಥಳೀಯ ಪೊಲೀಸ್ ಸಂಸ್ಥೆಗಳ ವರದಿಗಳು ಪ್ರತಿಕೂಲವೆಂದು ಭಾವಿಸಿದರೆ, ಜಿಲ್ಲಾ ಸಮಿತಿಯು ವಿಶೇಷ ನಿರ್ಣಯದ ಮೂಲಕ ಉಪ ಪೊಲೀಸ್ ಅಧೀಕ್ಷಕರ ಪರಿಶೀಲನೆಯನ್ನು ಕೈಬಿಟ್ಟು ನೇರವಾಗಿ ಪ್ರಸ್ತಾವನೆಯನ್ನು ಸ್ವೀಕರಿಸಲು ಅಧಿಕಾರವನ್ನು ಹೊಂದಿರುತ್ತದೆ. ಅಂತಹ ಸಂದರ್ಭಗಳಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸಮಿತಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು.

<u>ಶರಣಾಗತಿಯ ಪಸ್ತಾವನೆಗಳನ್ನು ಸ್ವೀಕರಿಸಿದ ಜಿಲ್ಲಾ ಸಮಿತಿಯು ಈ ಕೆಳಗಿನ ವಿಷಯಗಳ ಬಗ್ಗೆ ಚರ್ಚಿಸುವುದು.</u>

(ಎ) ಶರಣಾಗತನಾಗುವ ವ್ಯಕ್ತಿಯು ಈ ನಿರ್ದಿಷ್ಟ ಯೋಜನೆಯಡಿ ಅರ್ಹನಾಗಿದ್ದಾನೆಯೇ?

(ಬಿ) ಶರಣಾಗತಿ ಪ್ರಸ್ತಾವನೆಯು LWE ಚಟುವಟಿಕೆಗಳನ್ನು ನಿಗ್ರಹಿಸುವ ಉದ್ದೇಶವನ್ನು ಪೂರೈಸುವಲ್ಲಿ ಪ್ರಯೋಜನ/ಸಾರ್ವಜನಿಕ ಹಿತ/ಉಪಯುಕ್ತತೆ/ಅನುಕೂಲಗಳನ್ನು ಕಾಪಾಡುತ್ತದೆಯೇ?

(ಸಿ) ಅನ್ವಯಿಸಬೇಕಾದ ಪುನರ್ವಸತಿ ಯೋಜನೆ.

(ಡಿ) ಕಾನೂನಿನ ವಿವಾದಾತ್ಮಕ ಅಂಶಗಳ ಬಗ್ಗೆ.

ಈ ಚರ್ಚಿತ ವಿಷಯಗಳ ನಿರ್ಣಯಗಳನ್ನು ಜಿಲ್ಲಾ ಸಮಿತಿಯು ಡಿಜಿ & ಐಜಿಪಿಯವರಿಗೆ ಕಳುಹಿಸಿಕೊಡುವುದು. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ರಾಜ್ಯ ಸಮಿತಿಗೆ ಸಲ್ಲಿಸುವುದು.

5. **ಪ್ರಕ್ರಿಯೆ/ಕಾರ್ಯ ವಿಧಾನ :**

ಯಾವ ವ್ಯಕ್ತಿಗೆ ಶರಣಾಗತರಾಗಲು ಅವಕಾಶ ಕಲ್ಪಿಸಲಾಗಿದೆಯೋ, ಅವರ ಪ್ರಸ್ತಾವನೆಯು ಅಂಗೀಕಾರವಾದ ನಂತರ ಈ ಕೆಳಗಿನ ಕಾರ್ಯ ವಿಧಾನಗಳನ್ನು ಅನುಸರಿಸಲಾಗುವುದು.

(ಎ) ಶರಣಾಗುವ LWE ಸಂಘಟನೆಯ ಸದಸ್ಯನು ಯಾವುದೇ ಜಿಲ್ಲಾ ಸಮಿತಿಯ ಸದಸ್ಯರ ಮುಂದೆ ಅಥವಾ ಯಾವುದೇ ರಾಜ್ಯ ಸಮಿತಿಯ ಸದಸ್ಯರ ಮುಂದೆ ಕೂಡ ಶರಣಾಗಬಹುದು. ಹೀಗಾದಲ್ಲಿ ರಾಜ್ಯ ಸಮಿತಿಯವರು ಆತನನ್ನು ಜಿಲ್ಲಾ ಕಮಿಟಿಯ ಮುಂದೆ ಹಾಜರುಪಡಿಸಬೇಕು.

(ಬಿ) ಶರಣಾಗತರಾದವರು ಮಾಧ್ಯಮಗಳ ಮುಂದೆ ತಾನಾಗಿಯೇ ಸ್ವಇಚ್ಛೆಯಿಂದ ಶರಣಾಗುತ್ತಿರುವುದಾಗಿ ಸಾರ್ವಜನಿಕ ಹೇಳಿಕೆ ನೀಡುವುದನ್ನು ಸಮಿತಿಯು ಖಚಿತಪಡಿಸಬೇಕು.

(ಸಿ) ಜಿಲ್ಲಾ ಕಮಿಟಿಯ ಮುಂದೆ ಶರಣಾದ ವ್ಯಕ್ತಿಯು ಸದರಿ ಸ್ಥಳದಲ್ಲಿ ನಡೆಯುತ್ತಿರುವ LWE ಚಟುವಟಿಕೆಗಳ ಪೂರ್ಣ ಮಾಹಿತಿ, ಭೂಗತವಾಗಿರುವ ಎಲ್ಲಾ ಸದಸ್ಯರ ಹೆಸರುಗಳನ್ನು ಬಹಿರಂಗ ಪಡಿಸಬೇಕು. ಈ ಸ್ವ ಇಚ್ಛಾ ಹೇಳಿಕೆಯನ್ನು ಇನ್ ಕ್ಯಾಮರಾ ವಿಧಾನದಲ್ಲಿ ದಾಖಲಿಸಬೇಕು.

(ಡಿ) ಒಂದು ಶರಣಾಗತಿ ವರದಿಯನ್ನು ತಯಾರಿಸಿ, ಜಿಲ್ಲಾ ಶರಣಾಗತಿ ಸಮಿತಿಯ ಮುಂದಿಡಬೇಕು. ಜಿಲ್ಲಾ ಶರಣಾಗತಿ ಸಮಿತಿಯು ಈ ವರದಿಯನ್ನು ರಾಜ್ಯ ಶರಣಾಗತಿ ಸಮಿತಿಗೆ ಅನುಮೋದನೆಗಾಗಿ ಕಳುಹಿಸಿಕೊಡಬೇಕು.

(ಇ) ಶರಣಾಗತನಾದ ನಂತರ ಆತನಿಗೆ ಅನ್ವಯವಾಗುವಂತಹ ಶರಣಾಗತಿ ಸೌಲಭ್ಯಗಳನ್ನು ಜಿಲ್ಲಾ ಸಮಿತಿಯು ಹಂಚಿಕೆ ಮತ್ತು ವಿತರಣೆ ಮಾಡಬೇಕು.

(ಎಫ್) ಶರಣಾಗತನಾದ LWE ಸದಸ್ಯನ ಮೇಲೆ ಎರಡು ವರ್ಷಗಳ ಅವಧಿಯವರೆಗೆ ಲಕ್ಷ್ಯವಿಡಲು ಆಂತರಿಕ ಭದ್ರತಾ ವಿಭಾಗದ ಡಿ.ವೈ.ಎಸ್.ಪಿ. ಶ್ರೇಣಿಯ ಅಧಿಕಾರಿಯು ಸಂಪರ್ಕಾಧಿಕಾರಿಯಾಗಿರುತ್ತಾರೆ. ಈ ಸಂಪರ್ಕಾಧಿಕಾರಿಯು ಶರಣಾಗತರಾದ ಮತ್ತು ಪುನರ್ವಸತಿ ಯೋಜನೆಗೆ ಒಳಪಟ್ಟ ವ್ಯಕ್ತಿಗಳ ಚಲನವಲನದ ಬಗ್ಗೆ ನಿಗಾವಹಿಸಿ ತಿಂಗಳಿಗೊಮ್ಮೆಯಂತೆ ಎರಡು ವರ್ಷದವರೆಗೆ ವರದಿ ಸಲ್ಲಿಸುತ್ತಾರೆ.

ಈ ಸಮಿತಿಯು ಈ ಯೋಜನೆಯಡಿ ಬರುವ ವ್ಯಕ್ತಿಗಳ ಪಟ್ಟಿಯನ್ನು ನಿರ್ವಹಿಸುತ್ತದೆ. ಪ್ರತಿ ಪ್ರಕರಣದಲ್ಲಿ ಸಂಪರ್ಕಾಧಿಕಾರಿಯು ಪ್ರತಿ ತಿಂಗಳು ಸಲ್ಲಿಸುವ ನಿಗಾವಣೆ ವರದಿಯನ್ನು ಜಿಲ್ಲಾ ಸಮಿತಿಯ ಸಂಚಾಲಕರು ತಮ್ಮ ತ್ರೈಮಾಸಿಕ ವರದಿಯಲ್ಲಿ ನಮೂದಿಸಬೇಕು. ಈ ವರದಿಯಲ್ಲಿ ಮಾವೋವಾದಿ ನಕ್ಸಲ್ ಚಟುವಟಿಕೆಗಳನ್ನು ನಿಗ್ರಹಿಸುವ ಹೋರಾಟದಲ್ಲಿ ಈ ಯೋಜನೆಯಿಂದಾದ ನಿರ್ದಿಷ್ಟ ಪ್ರಗತಿ ಮತ್ತು ಪುನರ್ವಸತಿಗೆ ಆಯ್ಕೆಯಾದ ವ್ಯಕ್ತಿಗಳ ವಿವರವಾದ ಪಟ್ಟಿಯಿರುತ್ತದೆ.

**6. ಅನುಕೂಲತೆಗಳು/ಪ್ರಯೋಜನಗಳು.**

ಷರತ್ತು ಬದ್ಧ ನಗದು ಪರಿಹಾರ.
ಪ್ರವರ್ಗ ಎ : ರೂ. 7.50 ಲಕ್ಷಗಳು.
ಪ್ರವರ್ಗ ಬಿ : ರೂ. 4.00 ಲಕ್ಷಗಳು.
ಪ್ರವರ್ಗ ಸಿ : ರೂ. 2.00 ಲಕ್ಷಗಳು.

**(ಎ) ಹಣದ ಮಂಜೂರಾತಿ**

ಪ್ರವರ್ಗ "ಎ" ಅಡಿಯಲ್ಲಿ ಶರಣಾಗತಿಯಾದ ಸಂದರ್ಭದಲ್ಲಿ ಸರ್ಕಾರವು ರೂ 3.00 ಲಕ್ಷ ರೂಪಾಯಿಗಳನ್ನು ಏಕಾಕಾಲಕ್ಕೆ ನೀಡುವುದು. ಶರಣಾಗತಿಯಾದ ಒಂದು ವರ್ಷದ ಅವಧಿ ಮುಗಿದ ನಂತರ 2.00 ಲಕ್ಷ ರೂಗಳನ್ನು ಬಿಡುಗಡೆ ಮಾಡಲಾಗುವುದು. ಶರಣಾಗತಿಯಾದ ಎರಡು ವರ್ಷದ ಅವಧಿ ಮುಗಿದ ನಂತರ 2.00 ಲಕ್ಷ ರೂಗಳನ್ನು ಬಿಡುಗಡೆ ಮಾಡಲಾಗುವುದು.

ಪ್ರವರ್ಗ "ಬಿ" ಅಡಿಯಲ್ಲಿ ಶರಣಾಗತಿಯಾದ ಸಂದರ್ಭದಲ್ಲಿ ಸರ್ಕಾರವು ರೂ 2.00 ಲಕ್ಷ ರೂಪಾಯಿಗಳನ್ನು ಏಕಾಕಾಲಕ್ಕೆ ನೀಡುವುದು. ಶರಣಾಗತಿಯಾದ ಒಂದು ವರ್ಷದ ಅವಧಿ ಮುಗಿದ ನಂತರ 1.00 ಲಕ್ಷ ರೂಗಳನ್ನು ಬಿಡುಗಡೆ ಮಾಡಲಾಗುವುದು. ಶರಣಾಗತಿಯಾದ ಎರಡು ವರ್ಷದ ಅವಧಿ ಮುಗಿದ ನಂತರ 1.00 ಲಕ್ಷ ರೂಗಳನ್ನು ಬಿಡುಗಡೆ ಮಾಡಲಾಗುವುದು.

ಪ್ರವರ್ಗ "ಸಿ" ಅಡಿಯಲ್ಲಿ ಶರಣಾಗತಿಯಾದ ಸಂದರ್ಭದಲ್ಲಿ ಸರ್ಕಾರವು ರೂ 1.00 ಲಕ್ಷಗಳನ್ನು ಏಕಾಕಾಲಕ್ಕೆ ನೀಡುವುದು. ಶರಣಾಗತಿಯಾದ ಒಂದು ವರ್ಷದ ಅವಧಿ ಮುಗಿದ ನಂತರ 50 ಸಾವಿರ ರೂಗಳನ್ನು ಬಿಡುಗಡೆ ಮಾಡಲಾಗುವುದು. ಶರಣಾಗತಿಯಾದ ಎರಡು ವರ್ಷದ ಅವಧಿ ಮುಗಿದ ನಂತರ 50 ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಲಾಗುವುದು.

ಶರಣಾಗತರಾದವರು ವ್ಯಾಪಾರ ಅಥವಾ ವೃತ್ತಿ ನಡೆಸಲು ಒಲವು ತೋರಿಸಿದ್ದಲ್ಲಿ, ಆ ಬಗ್ಗೆ ಕೌಶಲ್ಯ ತರಬೇತಿ ಪಡೆಯಲು ಇಚ್ಛಿಸಿದ್ದಲ್ಲಿ, ಮಾನ್ಯತೆ ಪಡೆದ ತರಬೇತಿ ಸಂಸ್ಥೆಗೆ ದಾಖಲಾದ ನಂತರ ಅವರಿಗೆ ತಿಂಗಳಿಗೆ ರೂ.5000/– ರೂಗಳ ಪ್ರೋತ್ಸಾಹ ಧನ ನೀಡಲಾಗುವುದು. ಈ ಸೌಲಭ್ಯವು ಗರಿಷ್ಠ ಒಂದು ವರ್ಷದವರೆಗೆ ಇರುತ್ತದೆ. ಇದೇ ರೀತಿಯ ಸೌಲಭ್ಯವನ್ನು ಔಪಚಾರಿಕ ಶಿಕ್ಷಣ (Formal Education) ಪಡೆಯಲು ಪ್ರಯತ್ನಿಸುವವರಿಗೂ ಎರಡು ವರ್ಷಗಳ ಅವಧಿಯವರೆಗೆ ವಿಸ್ತರಿಸಲಾಗುವುದು.

ಒಂದು ವೇಳೆ ಶರಣಾಗತರಾದವರು ತಮ್ಮೊಂದಿಗೆ ಯಾವುದೇ ಶಸ್ತ್ರಾಸ್ತ್ರ ಅಥವಾ ಉಪಕರಣಗಳನ್ನು ಶರಣಾಗತಿ ಮಾಡಿದರೆ ಈ ಕೆಳಗಿನ ಪ್ರೋತ್ಸಾಹ ಧನವನ್ನು ಪ್ರತೀ ಆಯುಧ ಅಥವಾ ಉಪಕರಣಕ್ಕೆ ನೀಡಲಾಗುವುದು.

| ಕ್ರ ಸಂ. | ಆಯುಧ/ಉಪಕರಣ | ಪ್ರೋತ್ಸಾಹ ಧನ: ರೂ ಗಳಲ್ಲಿ |
|---|---|---|
| 1. | ಎ.ಕೆ–47/56/74 ರೈಫಲ್ | ಒಂದು ಆಯುಧಕ್ಕೆ 30,000/– |
| 2. | ಯುಎಂಜಿ/ಜಿಪಿಎಂ/ಆರ್‌ಪಿಜಿ/ಸ್ನೈಪರ್ ರೈಫಲ್ | ಒಂದು ಆಯುಧಕ್ಕೆ 50,000/– |
| 3. | ಪಿಸ್ತೂಲ್/ರಿವಾಲ್ವರ್ | ಒಂದು ಆಯುಧಕ್ಕೆ 10,000/– |
| 4. | ರಾಕೆಟ್ | ಒಂದು ಆಯುಧಕ್ಕೆ 3,000/– |
| 5. | ಎಸ್‌ಎಎಂ ಮಿಸ್ಸೈಲ್ | ಒಂದು ಆಯುಧಕ್ಕೆ 40,000/– |
| 6. | ಗ್ರೆನೇಡ್/ಹ್ಯಾಂಡ್ ಗ್ರೆನೇಡ್/ಸ್ಟಿಕ್ ಗ್ರೆನೇಡ್ | ಒಂದು ಗ್ರೆನೇಡ್‌ಗೆ 2,000/– |
| 7. | ಸ್ಫೋಟಕ ವಸ್ತುಗಳು | ಒಂದು ಕೆ.ಜಿ ಗೆ 4,000/– |
| 8. | ಎಲೆಕ್ಟ್ರಿಕ್ ಡೆಟೋನೇಟರ್ ಮತ್ತು<br>ಇತರೆ ಡೆಟೋನೇಟರ್‌ಗಳು | 100/–<br>20/– |
| 9. | ಮೈನ್ಸ್ | ಒಂದು ಮಿಸ್ಸೈಲ್‌ಗೆ 6,000/– |
| 10. | ಐಇಡಿ | ಒಂದಕ್ಕೆ 2,000/– |
| 11. | ಸೆಟಿಲೈಟ್ ಫೋನ್ | 20,000/– |
| 12. | ವಿಹೆಚ್‌ಎಫ್/ ಹೆಚ್‌ಎಫ್ ಕಮ್ಯುನಿಕೇಷನ್ ಸೆಟ್‌ಗಳು | 10,000/– |
| 13. | ವಯರ್‌ಲೆಸ್ ಸೆಟ್<br>(ಎ) ಶಾರ್ಟ್ ರೇಂಜ್<br>(ಬಿ) ಲಾಂಗ್ ರೇಂಜ್ | <br>2,000/–<br>10,000/– |
| 14. | ಎಲ್ಲಾ ವಿಧದ ಮದ್ದುಗುಂಡುಗಳು | ಒಂದು ಗುಂಡಿಗೆ 100/– |
| 15. | ರಿಮೋಟ್ ಕಂಟ್ರೋಲ್ ಡಿವೈಸ್ | ಒಂದು ಡಿವೈಸ್‌ಗೆ 6,000/– |

(ಬಿ) ಹೆಚ್ಚುವರಿ ಪ್ರೋತ್ಸಾಹಗಳು:

ಒಂದು ವೇಳೆ ಶರಣಾಗತರಾದ LWE ಸದಸ್ಯರು ಈ ಕೆಳಗಿನಲ್ಲಿರುವಂತೆ ಕ್ರಿಯಾಶೀಲವಾದ ಮಾಹಿತಿಗಳನ್ನು ನೀಡಿದರೆ ಹೆಚ್ಚುವರಿ ಪ್ರೋತ್ಸಾಹಗಳನ್ನು ನೀಡಬಹುದು.

(i) ಮತ್ತೊಬ್ಬ LWE ದಳಂನ ಅಥವಾ ಭೂಗತ ಸದಸ್ಯನನ್ನು ವಶಕ್ಕೆ ಪಡೆಯಲು ಅಥವಾ ಶರಣಾಗತಿಗೆ ಕಾರಣವಾಗುವ ಮಾಹಿತಿ.

(ii) ಶಸ್ತ್ರಾಸ್ತ್ರಗಳನ್ನು ಬಚ್ಚಿಡುವ ಡಂಪ್‌ಗಳನ್ನು ಪತ್ತೆ ಮಾಡಲು ದಾರಿ ತೋರಿಸುವ ಮಾಹಿತಿಗಳು.

ಈ ಹೆಚ್ಚುವರಿ ಪ್ರೋತ್ಸಾಹಗಳು ದಳಂ ಸದಸ್ಯನಿಗೆ ನೀಡಲಾಗುವ ನಗದು ಪರಿಹಾರದ ಶೇಕಡ 20 ಕ್ಕಿಂತ ಹೆಚ್ಚಾಗಬಾರದು (ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಲ್ಲಿ ಮಾತ್ರ) ಅಥವಾ ಡಂಪ್‌ನಲ್ಲಿ ಲಭ್ಯವಾದ ಆಯುಧಗಳಿಗೆ ಮೊತ್ತವನ್ನು ರಾಜ್ಯ ಸಮಿತಿಯು ನಿರ್ಧರಿಸಿದಂತೆ ನೀಡಲಾಗುವುದು.

(ಸಿ) ಬೆಂಬಲ ಯೋಜನೆಗಳು:

ಒಂದು ವೇಳೆ ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ ಹೆಸರಿಲ್ಲದ ಅಥವಾ ಯಾವುದೇ ಲಿಸ್ಟ್‌ನಲ್ಲಿ ಸೇರಿರದ ಭೂಗತ ಗುಂಪಿನ ವ್ಯಕ್ತಿ ಅಂದರೆ ಎಡಪಂಥೀಯ ವಿಚಾರಧಾರೆಗಳನ್ನು ಹೊಂದಿದ/ನಕ್ಸಲನು ಶರಣಾಗತಿಯಾಗಲು ಬಯಸಿದ್ದಲ್ಲಿ, ಈತನನ್ನು ಶರಣಾಗತಿ ಸೌಲಭ್ಯಗಳ ಯೋಜನೆಯಂತೆ ಪರಿಗಣಿಸಲಾಗುವುದು ಹಾಗೂ ಈ ಕೆಳಗಿನಂತೆ ಸೌಲಭ್ಯಗಳನ್ನು ನೀಡಲಾಗುವುದು.

i. ಆತ ಯಾವುದೇ ವೃತ್ತಿಪರ ಅಥವಾ ಕೌಶಲ್ಯ ತರಬೇತಿಗಳಿಗೆ ನೊಂದಾಯಿಸಿಕೊಂಡಲ್ಲಿ ಪ್ರತಿ ತಿಂಗಳಿಗೆ 5000/– ರೂನಂತೆ ಎರಡು ವರ್ಷಗಳವರೆಗೆ ಪ್ರೋತ್ಸಾಹ ಧನ ನೀಡಲಾಗುವುದು. ಇದೇ ರೀತಿ ಮೂರು ವರ್ಷಗಳ ಅವಧಿವರೆಗೆ ಔಪಚಾರಿಕ ಶಿಕ್ಷಣಕ್ಕೆ ಪ್ರೋತ್ಸಾಹ ಧನ ನೀಡಲಾಗುವುದು.

ii. ಶರಣಾಗತರಾದವರು ಯಾವುದೇ ಆಯುಧ ಅಥವಾ ಉಪಕರಣಗಳನ್ನು ಶರಣಾಗತಿ ಮಾಡಿದರೆ ಪ್ರತಿ ಆಯುಧ ಅಥವಾ ಉಪಕರಣಗಳಿಗೆ ಪ್ರೋತ್ಸಾಹ ಧನವನ್ನು ಮೇಲೆ ವಿವರಿಸಿದಂತೆ ವಿತರಿಸಲಾಗುವುದು.

(ಡಿ) ಯೋಜನೆಯ ಹತೋಟಿ:

LWE ಚಟುವಟಿಕೆಗಳನ್ನು ನಿಯಂತ್ರಿಸುವ ಕಾರ್ಯದಲ್ಲಿ ಸಕ್ರಿಯವಾಗಿ ಬಾಹ್ಯ ಬೆಂಬಲ ನೀಡುವವರನ್ನು ಪರಿವರ್ತಿಸುವುದು, LWE ಚಟುವಟಿಕೆಗಳ ನೇಮಕಾತಿಗಾಗಿ ಸಂಪರ್ಕಿಸಲಾದ ದುರ್ಬಲ ವ್ಯಕ್ತಿಗಳನ್ನು ಗುರುತಿಸುವುದು, ಬಂಧನಕ್ಕೆ ಒಳಗಾಗಿ ನಂತರ ಬಿಡುಗಡೆಯಾದ ಸದಸ್ಯರನ್ನು ನಿಯಂತ್ರಿಸುವುದು ಇವುಗಳನ್ನು ಒಳಗೊಂಡಿರುತ್ತದೆ. ಈ ವ್ಯಕ್ತಿಗಳನ್ನು ರಾಜ್ಯ ಪ್ರಾಯೋಜಿಸಿದ ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಲು ಪ್ರಯತ್ನಿಸಲಾಗುವುದು.

ಜಿಲ್ಲಾ ಸಮಿತಿಯು ಈ ಕೆಳಗಿನ ವಿಧಾನಗಳ ಮೂಲಕ LWE ಚಟುವಟಿಕೆಗಳಾದಂತಹ ನೇಮಕಾತಿ, ಸರ್ಕಾರದ ವಿರುದ್ಧದ ಅಪಪ್ರಚಾರಗಳು, ಮುಂತಾದ ಒತ್ತಡಗಳನ್ನು ತಡೆಗಟ್ಟಲು ಪ್ರಯತ್ನಿಸುತ್ತದೆ.

(i) ನೇಮಕಾತಿಗಾಗಿ LWE ಸಂಘಟನೆಗಳನ್ನು ಸಂಪರ್ಕಿಸಿದ ವ್ಯಕ್ತಿಗಳ ಕುಂದುಕೊರತೆಗಳು ಮತ್ತು ಆ ಸಮಸ್ಯೆಗಳಿಗೆ ಪರಿಹಾರಕ್ಕೆ ಅವರೊಂದಿಗೆ ಸಂವಾದ ನಡೆಸುವುದು.

(ii) ರಾಜ್ಯದ ವಿರುದ್ಧ ಅಪಪ್ರಚಾರ ನಡೆಸಲು ದಾರಿ ತಪ್ಪಿಸುತ್ತಿರುವ ಬಾಹ್ಯ ಬೆಂಬಲಿಗರೊಂದಿಗೆ ಸಂವಾದ ನಡೆಸಿ ಸಮಸ್ಯೆ ಬಗೆಹರಿಸುವುದು.

(iii) ಬಂಧನದಿಂದ ಬಿಡುಗಡೆಗೊಂಡ LWE ಸದಸ್ಯರು ಪುನಃ ನಕ್ಸಲ್ ಚಳುವಳಿಗೆ ಸೇರುವ ಸಾಧ್ಯತೆ ಇದ್ದಲ್ಲಿ, ಅಂತವರಿಗೆ ಯಾವುದೇ ವಿಶೇಷ ಸಹಾಯ ಮತ್ತು ಬೆಂಬಲ ನೀಡುವುದು.

(iv) ವಿವಿಧ ಅನುಕೂಲತೆಗಳನ್ನು ಪಡೆದ ಮೇಲ್ಕಂಡ ಪ್ರವರ್ಗದ ವ್ಯಕ್ತಿಗಳು LWE ಪರವಾದ ಬೆಂಬಲಿಗರ ಪ್ರಚಾರದ ವಿರುದ್ಧ ಹೋರಾಟ ನಡೆಸುತ್ತಿದ್ದಾರೆಯೇ/ಇಲ್ಲವೇ ಎಂಬುದನ್ನು ಪರಿಗಣಿಸಿ ಅದರ ಆಧಾರದ ಮೇರೆಗೆ ಆರ್ಥಿಕ ಸೌಲಭ್ಯವನ್ನು ನೀಡುವುದು.

ವಿವಿಧ ಯೋಜನೆಗಳ ಅಡಿಯಲ್ಲಿ ನಿರ್ದಿಷ್ಟ ಅನುಕೂಲತೆಗಳನ್ನು ಒದಗಿಸಲು ಜಿಲ್ಲಾ ಸಮಿತಿಯ ಮುಂದೆ ಶರಣಾದ ಬೆಂಬಲಿಗರು ಅಥವಾ ದುರ್ಬಲ ವ್ಯಕ್ತಿಗಳ ಸಾಮಾಜಿಕ, ಆರ್ಥಿಕ ಹಿನ್ನೆಲೆಯನ್ನು ಪರಿಗಣಿಸಲಾಗುವುದು. ಪುನರ್ವಸತಿ ಪಡೆದ ವ್ಯಕ್ತಿಯ ಆದ್ಯತೆ ಮತ್ತು ಒದಗಿಸಲಾದ ಸೌಲಭ್ಯಗಳ ಉಪಯುಕ್ತತೆಗಳು LWE ಅಪಪ್ರಚಾರದ ವಿರುದ್ಧ ಪರಿಣಾಮಗಳನ್ನು ಬೀರಿದೆಯೇ ಎಂಬುದನ್ನು ಪರಿಗಣಿಸಲಾಗುವುದು.

7. **ಶರಣಾಗತಿ ಮಾಡಿದ ಆಯುಧಗಳ ಬಗ್ಗೆ:**

ನಕ್ಸಲರು ಶರಣಾಗತಿ ಮಾಡಿದ ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳ ಸುರಕ್ಷಿತ ಶೇಖರಣೆಯು ಸಂಬಂಧಪಟ್ಟ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಜವಾಬ್ದಾರಿಯಾಗಿರುತ್ತಾರೆ.

**ಕ್ರಿಮಿನಲ್ ಪ್ರಕರಣಗಳು:**

ಶರಣಾಗತರಾದವರು ಮಾಡಿದ ಘೋರ ಅಪರಾಧಗಳು ನ್ಯಾಯಾಲಯಗಳಲ್ಲಿ ಮುಂದುವರೆಯುತ್ತದೆ. ಆದಾಗ್ಯೂ, ರಾಜ್ಯ ಸರ್ಕಾರವು ಸರಿಯಾದ ಕಾರ್ಯ ವಿಧಾನಗಳ ಪಾಲನೆಯ ನಂತರ ಶರಣಾದವರ ವಿರುದ್ಧ ಬಾಕಿ ಇರುವ ಪ್ರಕರಣಗಳನ್ನು ಹಿಂಪಡೆಯಲು ಪರಿಗಣಿಸಬಹುದು. ರಾಜ್ಯ ಸರ್ಕಾರವು ಶರಣಾದ ನಕ್ಸಲರಿಗೆ ಉಚಿತ ಕಾನೂನು ಸೇವೆಗಳನ್ನು ಒದಗಿಸಲು ವಕೀಲರನ್ನು ಸಹಾ ನೇಮಿಸಬಹುದು. ಶರಣಾದವರ ವಿರುದ್ಧದ ಪ್ರಕರಣಗಳ ತ್ವರಿತ ವಿಚಾರಣೆಗಳಿಗಾಗಿ ರಾಜ್ಯ ಸರ್ಕಾರವು ತ್ವರಿತಗತಿ ನ್ಯಾಯಾಲಯಗಳನ್ನು ಸಹಾ ರಚಿಸಬಹುದು.

ರಾಜ್ಯ ಸರ್ಕಾರವು ಈ ಯೋಜನೆಯ ಕೆಲಸವನ್ನು ವಾರ್ಷಿಕವಾಗಿ ಪರಿಶೀಲಿಸಬಹುದು. ಅಗತ್ಯವಿದ್ದಲ್ಲಿ, ನಿಬಂಧನೆಗಳನ್ನು ಮಾರ್ಪಡಿಸಬಹುದು. ಅಂತಹ ಮಾರ್ಪಾಟು ಮಾಡುವವರೆಗೆ ಈ ಯೋಜನೆಯ ನಿಯಮಗಳು ಚಾಲ್ತಿಯಲ್ಲಿರುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ನಾಗರಾಜು ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ(ಕಾನೂನು ಮತ್ತು ಸುವ್ಯವಸ್ಥೆ)

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ ರವರಿಗೆ-ಮುಂದಿನ ರಾಜ್ಯಪತ್ರದ ಸಂಚಿಕೆಯಲ್ಲಿ ಪ್ರಕಟಣೆಗಾಗಿ.

**ಇವರಿಗೆ:**

1) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು.
2) ಪೊಲೀಸ್ ಮಹಾ ನಿರ್ದೇಶಕರು, ಆಂತರಿಕ ಭದ್ರತಾ ವಿಭಾಗ, ಬೆಂಗಳೂರು.
3) ನಿರ್ದೇಶಕರು, ರಾಜ್ಯ ಗುಪ್ತವಾರ್ತೆ, ಬೆಂಗಳೂರು.
4) ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕಾನೂನು ಮತ್ತು ಸುವ್ಯವಸ್ಥೆ/ಅಪರಾಧ/ಆಡಳಿತ/ಎಎನ್‌ಎಫ್, ಬೆಂಗಳೂರು.
5) ಎಲ್ಲಾ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿಗಳು.
6) ಎಲ್ಲಾ ವಲಯ ಆರಕ್ಷಕ ಮಹಾನಿರೀಕ್ಷಕರು.
7) ರಾಜ್ಯದ ಎಲ್ಲಾ ಪೊಲೀಸ್ ಆಯುಕ್ತರು/ಪೊಲೀಸ್ ಅಧೀಕ್ಷಕರು.
8) ರಾಜ್ಯಮಟ್ಟದ ಸಮಿತಿಯ ಎಲ್ಲಾ ಸದಸ್ಯರುಗಳು-ನಿರ್ದೇಶಕರು, ರಾಜ್ಯ ಗುಪ್ತವಾರ್ತೆ, ಬೆಂಗಳೂರು ರವರ ಮುಖಾಂತರ.
9) ಜಿಲ್ಲಾ ಮಟ್ಟದ ಸಮಿತಿಯ ಎಲ್ಲಾ ಸದಸ್ಯರುಗಳು-ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮುಖಾಂತರ.

**ಪ್ರತಿ:**

1) ಮಾನ್ಯ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ.
4) ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಿ.ಸಿ.ಎ.ಎಸ್)ರವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ.
5) ಸರ್ಕಾರದ ವಿಶೇಷ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಪೊಲೀಸ್ ಸೇವೆಗಳು/ಸಮನ್ವಯ, ಒಳಾಡಳಿತ ಇಲಾಖೆ.
6) ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಾನೂನು ಮತ್ತು ಸುವ್ಯವಸ್ಥೆ, ಒಳಾಡಳಿತ ಇಲಾಖೆ.
7) ಹೆಚ್ಚುವರಿ ಪ್ರತಿಗಳು/ ಶಾಖಾ ರಕ್ಷಾ ಕಡತ.